**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**ಎಸ್ ಸಿ ಸಂಖ್ಯೆ– 208/2022**

**ಫಿರ್ಯಾದಿದಾರಃ–** ಸರಕಾರದ ಪರವಾಗಿ
**ಬಿಳಿಕೆರೆ ಪೊಲೀಸ್ ಠಾಣೆ.**

**– ವಿರುದ್ಧ –**

**ಆಪಾದಿತಃ–** **ದೊಡ್ಡನಾಯಕ** ಬಿನ್ ದೊಡ್ಡಗುಜ್ಜನಾಯಕ
ವಯಸ್ಸು ಸುಮಾರು 35 ವರ್ಷಗಳು,
ಕೂಲಿ ಕೆಲಸ, ಬಿಳಿಕೆರೆ ಗ್ರಾಮ,
ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ.

## ದೋಷಾರೋಪಣೆ

ನಾನು ಟಿ.ಗೋವಿಂದಯ್ಯ., ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮೈಸೂರು, ಹುಣಸೂರು ಪೀಠ, ಆದ ನಾನು ನಿನ್ನನ್ನು ಈ ಕೆಳಗಿನಂತೆ ದೋಷಾರೋಪಣೆಗೆ ಒಳಪಡಿಸುತ್ತಿದ್ದೇನೆ ,

ದಿನಾಂಕ 04–05–2020 ರಂದು ರಾತ್ರಿ 8.30 ಗಂಟೆ ಸಮಯದಲ್ಲಿ ಬಿಳಿಕೆರೆ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಚಾಸಾ–1–ಕರಿನಾಯಕರವರ ಜಮೀನಿನ ಮುಂದೆ ಹಾದುಹೋಗಿರುವ ರಸ್ತೆಯಲ್ಲಿ ಆರೋಪಿಯಾದ ನೀನು ಚಾಸಾ–1–ಕರಿನಾಯಕರವರ ಜಮೀನಿನಲ್ಲಿ ಮಾವಿನ ಕಾಯಿ ಕಿತ್ತುಕೊಂಡು ಹೋಗುತ್ತಿದ್ದಾಗ ಚಾಸಾ–1–ಕರಿನಾಯಕರವರು ಆರೋಪಿಗೆ ಯಾಕೆ ನಮ್ಮ ಜಮೀನಿನಲ್ಲಿ ಮಾವಿನ ಕಾಯಿ ಕಿತ್ತುಕೊಂಡು ಹೋಗುತ್ತಿದ್ದೀಯಾ ಎಂದು ಕೇಳಿದ ವಿಚಾರದಲ್ಲಿ ಚಾಸಾ–1–ಕರಿನಾಯಕ ಮತ್ತು ಆರೋಪಿಗೂ ಮಾತಿಗೆ ನಡೆದು ಆರೋಪಿಯು ಚಾಸಾ–1–ಕರಿನಾಯಕ ರವರಿಗೆ ನೀನು ಮನೆಯ ಹತ್ತಿರ ಬಾ ನಿನಗೆ ಸರಿಯಾಗಿ ಬುದ್ದಿ ಕಲ್ಲಿಸುತ್ತೇನೆಂದು ಎಂದು ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದು ಅವಮಾನಪಡಿಸಿ ಸಾರ್ವಜನಿಕ ಶಾಂತತೆಗೆ ಭಂಗ ತರಲು ಪ್ರಚೋದಿಸಿ ಭಾರತೀಯ ದಂಡ ಸಂಹಿತೆ ಕಲಂ 504 ಅಡಿ ಅಪರಾಧವೆಸಗಿರುತ್ತೀಯಾ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಆರೋಪಿಯಾದ ನೀನು ಚಾಸಾ–1–ಕರಿನಾಯಕರವರು ಅದೆ ದಿವಸ ದಿನಾಂಕ 04–05–2020 ರಂದು ರಾತ್ರಿ 9.00 ಗಂಟೆ ಸಮಯದಲ್ಲಿ ಬಿಳಿಕೆರೆ ಗ್ರಾಮದ ನಾಯಕರ ಬೀದಿಯಲ್ಲಿರುವ ಸರ್ಕಾಲ್ ನಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಆರೋಪಿಯಾದ ನೀನು ಚಾಸಾ–1–ಕರಿನಾಯಕ ರವರನ್ನು ಕಂಡು ಬಾಯಿಗೆ ಬಂದಂತೆ ಬೈಯುತ್ತಾ ಏನೋ ನನ್ನ ಮೇಲೆ ಜಮೀನು ಹತ್ತಿರ ಗಲಾಟೆ ಮಾಡುತ್ತಿಯಾ ಇವತ್ತು ನಿನ್ನನ್ನು ಸಾಯಿಸದೆ ಬಿಡುವುದಿಲ್ಲವೆಂದು ಕೊಲೆ ಮಾಡುವ ಉದ್ದೇಶದಿಂದ ಆರೋಪಿಯಾದ ನೀನು ಚಾಸಾ–1–ಕರಿನಾಯಕ ರವರ ಎಡ ಪಕ್ಕೆಯ ಹತ್ತಿರ ಚಾಕುವಿನಿಂದ ಚುಚ್ಚಿ ರಕ್ತಗಾಯ ಮಾಡಿ ಕೊಲೆ ಮಾಡಲು ಪ್ರಯತ್ನಪಟ್ಟಿದ್ದು, ಭಾರತೀಯ ದಂಡ ಸಂಹಿತೆ ಕಲಂ 307 ಅಡಿ ಅಪರಾಧವೆಸಗಿರುತ್ತೀಯಾ.

ಈ ಮೇಲಿನ ಅಪರಾಧಗಳು ನನ್ನ ಸಂಜ್ಞೆಯಲ್ಲಿ ಬರುವುದರಿಂದ ಈ ಕುರಿತು ನಿನ್ನನ್ನು ಅಧಿವಿಚಾರಣೆಗೆ ಒಳಪಡಿಸಲು ಆದೇಶಿಸುತ್ತಿದ್ದೇನೆ.

**(ಟಿ.ಗೋವಿಂದಯ್ಯ)**
ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.